**ಓ.ಎಸ್.ನಂ.27/2019**
**ಪಿ ಡಬ್ಲ್ಯೂ: 2**

**ದಿನಾಂಕ:28.02.2020 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 7 ನೇ ಪ್ರತಿವಾದಿ ಪರ ಶ್ರೀ.ಬಿ.ಕೆ.ಪಿ. ವಕೀಲರಿಂದ :**

ನಾನು ಮತ್ತು ವಾದಿ ಊರಿನ ಗೌಡರು ಎಂದರೆ ಸರಿ. ನಾನು ಮತ್ತು ವಾದಿ ಸ್ನೇಹಿತರು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೇ ನಂ. 25 ಮತ್ತು 72 ಇರುತ್ತದೆ. ಸರ್ವೇ ನಂ. 25/2 ರ ಜಮೀನು ಯಾವಾಗ ಸರ್ವೇ ನಂ. 72 ರ ಜಮೀನು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೇ ನಂ. 25/2 ರ ಜಮೀನಿನ ಪೂರ್ವಕ್ಕೆ ಕಾಲುವೆ, ಪಶ್ಚಿಮಕ್ಕೆ ವಾದಿ ಬಸವರಾಜಪ್ಪನ ಜಮೀನು, ಉತ್ತರಕ್ಕೆ ಚನ್ನಯ್ಯರ ಬಸವರಾಪ್ಪನ ಜಮೀನು ಮತ್ತು ದಕ್ಷಿಣಕ್ಕೆ ನನ್ನ ಜಮೀನು ಸರ್ವೇ ನಂ. 19 ಇರುತ್ತದೆ. ಸರ್ವೇ ನಂ. 72 ರ ಜಮೀನಿನ ಚೆಕ್ಕುಬಂದಿ ಹೇಳಲು ಆಗುವುದಿಲ್ಲ. ಸದರಿ 25/2 ರ ಜಮೀನು ಮತ್ತು 72 ರ ಜಮೀನು ಕಾಲುವೆ ಬಂದ ನಂತರ ಬೇರೆ ಬೇರೆ ಅಗಿರುತ್ತವೆ. ಸರ್ವೇ ನಂ. 25/11 ಅಥವಾ 72 ರ ಜಮೀನು ಯಾರದ್ದು ಎಂದು ನನಗೆ ಗೊತ್ತಿಲ್ಲ.

ವಾದಿಯೆ ನನ್ನನ್ನು ಸಾಕ್ಷ್ಯ ನುಡಿಯಲು ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ವಾದಿ ಕೇಳಿಕೊಂಡಿದ್ದರಿಂದ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿಯಲ್ಲ. ಭದ್ರಾ ಕಾಲುವೆ ಸರ್ವೇ ನಂ. 25/2 ರಲ್ಲಿ ಹಾದು ಹೋದ ಬಗ್ಗೆ ನಾನು ಅಧಿಸೂಚನೆಯನ್ನು ನೋಡಿರುತ್ತೇನೆ. ಸರ್ವೇ ನಂ. 25/2 ರಲ್ಲಿ ಭದ್ರಾ ಕಾಲುವೆ ಹೋದ ಬಗ್ಗೆ ಸರ್ಕಾರದಿಂದ ಅಧಿಸೂಚನೆ ಆಗಿರುವುದಿಲ್ಲ ಎಂದರೆ ಸರಿ. ವಾದಿಯ ಜಮೀನಿನಲ್ಲಿ ಅಂದರೆ ಸರ್ವೇ ನಂ. 25/2 ರಲ್ಲಿ ಭದ್ರಾ ಕಾಲುವೆ ಹಾದುಹೋಗುತ್ತಿದೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಅಧಿಸೂಚನೆಯಲ್ಲಿ ಕಾಣಿಸುವ ಜಮೀನುಗಳಲ್ಲಿ ಮಾತ್ರ ಕಾಲುವೆಯನ್ನು ತೆಗೆಯಲಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ.

ವಾದಿಯ ಜಮೀನು ಸರ್ವೇ ನಂ. 25/2 ರಲ್ಲಿ ಪಹಣಿ ಪತ್ರಿಕೆಯ ಪ್ರಕಾರ 100 ತೆಂಗಿನ ಗಿಡಗಳು ಇರುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ತೆಂಗಿನ ಗಿಡಗಳನ್ನು ತೆಗೆದು ಈಗ ದಾಳಿಂಬೆ ಬೆಳೆ

ಬೆಳೆದಿರುತ್ತಾರೆ ಎಂದು ನುಡಿಯುತ್ತಾರೆ. ಈಗಲೂ ಸಹ ವಾದಿಯ ಜಮೀನಿನಲ್ಲಿ ತೆಂಗಿನ ಗಿಡಗಳು ಇರುತ್ತವೆ ಎಂದರೆ ಸರಿಯಲ್ಲ. ಸರ್ವೇ ನಂ. 25/2 ಮತ್ತು ಸ.ನಂ. 25/11(ಹೊಸ ನಂ. 72) ರ ಜಮೀನುಗಳು ಅಕ್ಕ ಪಕ್ಕದಲ್ಲಿಯೆ ಇರುತ್ತವೆ. ದಾವಾ ಸ್ವತ್ತಿಗೂ ಮತ್ತು ವಾದಿಯ ತಮ್ಮ ರಂಗಪ್ಪನ ಸ್ವತ್ತಿಗೂ ಸು.100 ಮೀ . ಅಂತರ ಇರುತ್ತದೆ. ವಾದಿಯ ತಮ್ಮನ ಜಮೀನಿನಲ್ಲಿ ಸು. 25 ವರ್ಷಗಳ ತೆಂಗಿನ ಗಿಡಗಳು ಇರುತ್ತವೆ. ವಾದಿಯ ತಮ್ಮನ ಜಮೀನಿನಲ್ಲಿ ಭದ್ರಾ ಕಾಲುವೆ ಹೋಗಿಲ್ಲ ಎಂದರೆ ಸರಿ. ವಾದಿಯ ಜಮೀನಿನಲ್ಲಿ ಭದ್ರಾ ಕಾಲುವೆ ಹಾದು ಹೋಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೇ ನಂ. 25/2 ರ ಜಮೀನಿನಲ್ಲಿ ವಾದಿ ಮತ್ತು ವಾದಿಯ ತಮ್ಮ ತಲಾ 2 ಎಕರೆ ಜಮೀನನ್ನು ಹಂಚಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂ. 25/11 (ಹೊಸ ನಂ.72) ರ ಜಮೀನಿನಲ್ಲಿ 7 ನೇ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 7 ನೇ ಪ್ರತಿವಾದಿ ಸ್ವರ್ವೇ ನಂ.73 ರಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ಸ.ನಂ.72 ರಲ್ಲಿ 7 ನೇ ಪ್ರತಿವಾದಿ ಸ್ವಾಧೀನದಲ್ಲಿ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನಿನ ದಾಖಲೆಗಳನ್ನು ನಾನು ನೋಡಿರುತ್ತೇನೆ. ಸ.ನಂ. 72 ರ ಜಮೀನು ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. 7 ನೇ ಪ್ರತಿವಾದಿಗೆ ಸ.ನಂ. 72 ರ ಜಮೀನಿನಲ್ಲಿ ಹಕ್ಕು ಅಧಿಕಾರ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನನ್ನ ಸ್ನೇಹಿತನಾಗಿರುವುದರಿಂದ ಆತನ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ.
ಹೊಸದುರ್ಗ .